**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 09-01-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. HVB ವಕೀಲರವರಿಂದಃ-**

ನಾನು ಬಿಎ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ದಾವೆಯ ವಿಚಾರಗಳು ನನಗಿಂತ ನನ್ನ ತಾಯಿಗೆ ಚೆನ್ನಾಗಿ ಗೊತ್ತಿದೆ ಎಂದರೆ ಸರಿ. ನನ್ನ ತಾಯಿಯು ವಿಚಾರಣೆ ನೀಡಿದ್ದಲ್ಲಿ ಸತ್ಯ ಹೊರಬರುತ್ತದೆ ಎಂದು ನಾನು ವಿಚಾರಣೆ ನೀಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾನಪತ್ರವನ್ನು ಓದಿಕೊಂಡಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದೆ. ಸದರಿ ದಾನಪತ್ರದಲ್ಲಿ ಸುಮಾರು 4-5 ಆಸ್ತಿಗಳನ್ನು ಬರೆಯಲಾಗಿದೆ. ದಾವಾ ಸ್ವತ್ತನ್ನು ಕೂಡ ದಾನಪತ್ರದಲ್ಲಿ ನಮೂದಿಸಲಾಗಿದೆ. ದಾವಾ ಸ್ವತ್ತನ್ನು ದಾನಪತ್ರದಲ್ಲಿ ಸರ್ವೇ ನಂ.569/2 ಎಂದು ತೋರಿಸಲಾಗಿದೆ.

ನಾನು ಕೌಡ್ಲೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ನಾಗಮಂಗಲದಲ್ಲಿರುವ ಖಾಸಗಿ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಕೌಡ್ಲೆ ಗ್ರಾಮದಲ್ಲಿ ವಾಸಿಸುತ್ತಿರದೇ ನಾಗಮಂಗಲದಲ್ಲಿ ವಾಸವಾಗಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿಯನ್ನು ದಾನಪತ್ರದಲ್ಲಿ ಪೂ- ಚಿಕ್ಕತಿಮ್ಮಯ್ಯನ ಸ್ವತ್ತು, ಪ- ತುಮಕೂರು ಮಂಡ್ಯ ರಸ್ತೆ, ದ- ರಸ್ತೆ, ಉ- ಚೌಡಯ್ಯ ರವರ ಸ್ವತ್ತು ಎಂದು ಬರೆಯಲಾಗಿದೆ. ದಾನಪತ್ರದಲ್ಲಿ ಹೇಳಿರುವ ಚಕ್ಕುಬಂಧಿಯನ್ನೇ ವಾದ ಪತ್ರದಲ್ಲಿ ನಮೂದಿಸಿದ್ದೇನೆ. ನಾನು ವಾದ ಪತ್ರದಲ್ಲಿ ದಾನಪತ್ರದಲ್ಲಿ ಹೇಳಿರುವ ಚಕ್ಕುಬಂಧಿಯನ್ನು ನಮೂದಿಸಿರದೇ ಬೇರೆ ಸ್ವತ್ತಿನ ಚಕ್ಕುಬಂಧಿಯನ್ನು ನಮೂದಿಸಿದ್ದೇನೆಂದರೆ ಸರಿಯಲ್ಲ.

ದಾವಾ ಸ್ವತ್ತು ಚೌಡಮ್ಮ ರವರ ತಂದೆ ತೋಪಯ್ಯ ರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲಾತಿ ಇಲ್ಲ. ಆದರೆ ಸದರಿಯವರು ಸ್ವಾಧೀನಾನುಭವ ಹೊಂದಿದ್ದರು ಎಂದು ತೋರಿಸಲು ಆರ್ ಟಿಸಿ ಯನ್ನು ಹಾಜರುಪಡಿಸಿದ್ದೇನೆ. ಸದರಿ ತೋಪಯ್ಯ ರವರಿಂದ ಚೌಡಮ್ಮ ರವರಿಗೆ ವರ್ಗಾವಣೆಯಾದ ಬಗ್ಗೆ ಆರ್ ಟಿಸಿ ಮತ್ತು ನೊಂದಾಯಿತ ದಾನ ಪತ್ರ ಇದೆ. ದಾನ ಪತ್ರವನ್ನು ಹೊರತುಪಡಿಸಿ ಚೌಡಮ್ಮ ರವರಿಗೆ ಸದರಿಯವರಿಗೆ ಹಕ್ಕು ಇತ್ತು ಎಂದು ತೋರಿಸಲು ಬೇರೆ ಯಾವುದೇ ದಾಖಲಾತಿ ಇಲ್ಲ.

1948 ರಿಂದಲೂ ತೋಪಯ್ಯ ರವರ ಹೆಸರಿನಲ್ಲಿ ದಾವಾ ಸ್ವತ್ತಿನ ಆರ್ ಟಿಸಿ ಬರುತ್ತಿದೆ. ಸದರಿ 1948 ರ ದಾಖಲೆಗಳನ್ನು ಹಾಜರುಪಡಿಸಿಲ್ಲ, ಸಾಕ್ಷಿ ಮುಂದುವರೆದು 1992 ರಿಂದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. 1992 ರಿಂದ ಚೌಡಮ್ಮ ರವರ ಹೆಸರಿನಲ್ಲಿ ದಾಖಲಾತಿ ಬರುತ್ತಿದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಚೌಡಮ್ಮ ಅಥವಾ ತೋಪಯ್ಯ ರವರ ಹೆಸರಿನಲ್ಲಿ ಯಾವುದೇ ಹಕ್ಕು ಅಥವಾ ಸ್ವಾಧೀನದ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳೊಂದಿಗೆ

ಶಾಮೀಲಾಗಿ ಚೌಡಮ್ಮ ರವರ ಹೆಸರಿನಲ್ಲಿ ಕೆಲವೊಂದು ದಾಖಲೆಗಳನ್ನು ಸೃಷ್ಟಿ ಮಾಡಿದ್ದೆವೆಂದರೆ ಸರಿಯಲ್ಲ.

ದಾವಾ ಸ್ವತ್ತು ಅನ್ಯಕ್ರಾಂತವಾಗಿರುವುದಿಲ್ಲ. ಪಂಚಾಯಿತಿಯಲ್ಲಿ ಚೌಡಮ್ಮ ಅಥವಾ ತೋಪಯ್ಯ ರವರ ಹೆಸರಿನಲ್ಲಾಗಲಿ ಯಾವುದೇ ಅಸೆಸ್ ಮೆಂಟ್ ಇರುವುದಿಲ್ಲ. ದಾವಾ ಸ್ವತ್ತು ತುಮಕೂರು-ಮದ್ದೂರು ರಸ್ತೆಯ ಪಕ್ಕದಲ್ಲಿಯೇ ಇದೆ ಎಂದರೆ ಸರಿ. ಸದರಿ ಚೌಡಮ್ಮ ಅಥವಾ ತೋಪಯ್ಯ ರವರ ಹೆಸರಿನಲ್ಲಿ ತುಮಕೂರು-ಮದ್ದೂರು ರಸ್ತೆಯ ಪಕ್ಕದಲ್ಲಿ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ 2 ರಿಂದ 6 ರವರು ಯಾವುದೇ ಕಟ್ಟಡ ನಿರ್ಮಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ 7 ಮತ್ತು 9 ರವರು ಕಟ್ಟಡಗಳನ್ನು ಕಟ್ಟಿದ್ದಾರೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ 1 ರಿಂದ 6 ರವರು ಅನ್ಯೂನ್ಯವಾಗಿದ್ದೇವೆಂದರೆ ಸರಿ. ಚೌಡಮ್ಮ ರವರಿಗೆ ಅವರ ತಂದೆಯು ಮಾಡಿದ ದಾನಪತ್ರದ ಮೂಲಕ ಬಂದ ಆಸ್ತಿಗಳನ್ನು ನಾವು ಮತ್ತು ಪ್ರತಿವಾದಿ 1 ರಿಂದ 6 ರವರು ಹಂಚಿಕೊಂಡಿದ್ದೇವೆ. ಸಾಕ್ಷಿ ಮುಂದುವರೆದು ದಾವಾ ಸ್ವತ್ತನ್ನು ಬಿಟ್ಟಿದ್ದೇವೆ ಎನ್ನುತ್ತಾರೆ. ಸದರಿ ವಿಭಾಗವು 1985 ರ ಹಿಂದೆ ನಾನು ಹುಟ್ಟುವ ಮೊದಲೇ ಆಗಿದೆ ಎನ್ನುತ್ತಾರೆ. ಸದರಿ ವಿಭಾಗವು ಮೌಖಿಕವಾಗಿ ಆಗಿರುತ್ತದೆ. ಸದರಿ ಮೌಖಿಕ ವಿಭಾಗದಂತೆ ಅವರವರ ಭಾಗಕ್ಕೆ ಖಾತೆ ಅಥವಾ ಕಂದಾಯ ದಾಖಲೆಗಳು ವರ್ಗಾವಣೆಗೊಂಡಿಲ್ಲ.

ಪ್ರತಿವಾದಿ 7 ಮತ್ತು 9 ರವರು ದಾವಾ ಸ್ವತ್ತಿನ ಹಕ್ಕು ಮತ್ತು ಸ್ವಾಧೀನ ಹೊಂದಿರುವುದರಿಂದ ಸದರಿಯವರು ಕಟ್ಟಡಗಳನ್ನು ಕಟ್ಟಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ 7 ರವರು ನಿರ್ಮಿಸಿರುವ ಕಟ್ಟಡಗಳು ವಾಣಿಜ್ಯ ಕಟ್ಟಡಗಳು ಆಗಿವೆ. ಸಾಕ್ಷಿ ಮುಂದುವರೆದು ಇತ್ತೀಚೆಗೆ ಅಂದರೆ 5 ವರ್ಷಗಳ ಈಚೆಗೆ ಕಟ್ಟಿದ್ದಾರೆ ಎನ್ನುತ್ತಾರೆ. ಅದರಂತೆ ಪ್ರತಿವಾದಿ 9 ರವರು ವಾಸದ ಮನೆಯನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ ವಾಣಿಜ್ಯ ಮಳಿಗೆಗಳು ಮತ್ತು ವಾಸದ ಮನೆ ಎರಡನ್ನು ಕಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 7 ಮತ್ತು 9 ರವರು ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಲೈಸೆನ್ಸ್ ಪಡೆದಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ದಾವೆ ಹೂಡಿದ ನಂತರ ಸದರಿಯವರು ಕಟ್ಟಡ ಕಟ್ಟಲು ಲೈಸೆನ್ಸ್ ಪಡೆದಿದ್ದರು ಎಂಬ ವಿಚಾರ ತಿಳಿಯಿತು.

ಪ್ರತಿವಾದಿ 7 ಮತ್ತು 9 ರವರು ತಾವು ಕಟ್ಟಿರುವ ವಾಣಿಜ್ಯ ಮಳಿಗೆಗಳನ್ನು ಬಾಡಿಗೆ ನೀಡಿದ್ದಾರೆಂದರೆ ಸರಿ. ಪ್ರತಿವಾದಿ 7 ರವರು ಸುಮಾರು 15 ವರ್ಷದಿಂದ ಅಂಗಡಿಗಳನ್ನು ಬಾಡಿಗೆ ನೀಡಿದ್ದಾರೆ. ಪ್ರತಿವಾದಿ 9 ರವರು ಸುಮಾರು 5 ವರ್ಷದಿಂದ ಅಂಗಡಿಗಳನ್ನು ಬಾಡಿಗೆ ನೀಡಿದ್ದಾರೆ. ಪ್ರತಿವಾದಿ 7 ಮತ್ತು 9 ರವರು ಕಟ್ಟಡ ನಿರ್ಮಿಸುವ ಸಂಧರ್ಭದಲ್ಲಿ ನಮ್ಮ ಕುಟುಂಬದವರ ಯಾರ ಸಮ್ಮತಿ ಪಡೆದಿಲ್ಲ ಎಂದರೆ ಸರಿ. ಅದರಂತೆ ದಾವೆಯಲ್ಲಿ ಸದರಿಯವರು ಸಮ್ಮತಿ ಪಡೆದು ಕಟ್ಟಡ ನಿರ್ಮಿಸಿದ್ದಾರೆ ಎಂದು ಹೇಳಿಲ್ಲ. ಸದರಿ ಕಟ್ಟಡ ನಿರ್ಮಿಸುವ ಸಂಧರ್ಬದಲ್ಲಿ ಜಗಳ ಆಗಿದೆ. 7 ನೇ

ಪ್ರತಿವಾದಿಯೊಂದಿಗೆ ಜಗಳ ಆಗಿರದೇ, ಪ್ರತಿವಾದಿ 9 ರವರು ಕಟ್ಟಡ ನಿರ್ಮಿಸುವಾಗ ಜಗಳ ಆಗಿದೆ. ಸದರಿ ವಿಚಾರವಾಗಿ ಪೊಲೀಸ್ ದೂರು ದಾಖಲಿಸಿದ್ದೇವು ಮತ್ತು ಸದರಿ ದಾಖಲೆಯನ್ನು ಹಾಜರುಪಡಿಸಿದ್ದೆನೆ. ಪ್ರತಿವಾದಿ 7 ಮತ್ತು 9 ರವರು ಲೈಸೆನ್ಸ್ ಪಡೆದಿರುವ ವಿಚಾರ ತಿಳಿದ ನಂತರ ನಾನು ಅದನ್ನು ಪಿಡಿಓ ಮುಂದೆ ಪ್ರಶ್ನೆ ಮಾಡಿದ್ದೆನೆ. ಆದರೆ ಸದರಿ ಲೈಸೆನ್ಸ್ ರದ್ದಾಗಿಲ್ಲ. ದಾವಾ ಸ್ವತ್ತಿನಲ್ಲಿ ತೋಪಯ್ಯನಿಗಾಗಲಿ, ಚೌಡಮ್ಮನಿಗಾಗಲಿ ಅಥವಾ ನಮಗಾಗಲಿ ಯಾವುದೇ ಹಕ್ಕು, ಅಧಿಕಾರ ಇಲ್ಲದ ಕಾರಣ ದಾವೆ ಹೂಡುವ ಹಕ್ಕಾಗಲಿ ಅಥವಾ ಪ್ರತಿವಾದಿ 11 ರವರಿಗೆ ಕಟ್ಟಡ ತೆರವುಗೊಳಿಸಲು ಆದೇಶ ಕೋರುವ ಹಕ್ಕಾಗಲಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಸರ್ವೇ ನಂ.569/2 ರಲ್ಲಿ ತೋಪಯ್ಯ ರವರಿಗೆ 4 ಗುಂಟೆ ಜಮೀನು ಇತ್ತು. ಸದರಿ ಜಮೀನು ತೋಪಯ್ಯ ರವರಿಗೆ ಪಿತ್ರಾರ್ಜಿತವಾಗಿ ಬಂದಿತ್ತು. ತೋಪಯ್ಯ ರವರೊಂದಿಗೆ 3 ಜನ ಒಡಹುಟ್ಟಿದವರು. ಅವರುಗಳೆಂದರೆ ತೋಪಯ್ಯ, ಚೌಡಯ್ಯ, ಚಿಕ್ಕತಿಮ್ಮಯ್ಯ ಮತ್ತು ಮಡ್ಡಯ್ಯ ಉಃ ಕೆಂಪ. ಸದರಿ 3 ಜನ ಸಹೋದರರಿಗೆ ದಾವಾ ಸರ್ವೆ ನಂ. ನಲ್ಲಿ ಯಾವುದೇ ಜಮೀನು ಬಂದಿರಲಿಲ್ಲ. ತೋಪಯ್ಯ ಮತ್ತು ಆತನ ಸಹೋದರರು ಅವರಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು. ಸದರಿ ವಿಭಾಗವು ಲಿಖಿತವಾಗಿ ಆಗಿರುತ್ತದೆ. ಸದರಿ ದಾವಾ ಸ್ವತ್ತು ತೋಪಯ್ಯ ರವರ ಭಾಗಕ್ಕೆ ಬಂದಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೆನೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು